ರಾಜಕೀಯ ಚಿಂತಕರು, ವಿದ್ಯಮಾನಗಳು ಮತ್ತು ಪ್ರಕ್ರಿಯೆಗಳು

ಒಂದು ಅಂಕದ ಪ್ರಶ್ನೆಗಳು ಮತ್ತು ಉತ್ತರಗಳು :–

1. ಜೆ.ಎಸ್.ಮಿಲ್‌ನ ಕಾಲ ತಿಳಿಸಿ.

   ಕ್ರಿ.ಶ. 1806–1873

   2. ಜೆ.ಎಸ್.ಮಿಲ್ ಎಲ್ಲಿ ಜನಿಸಿದನು?

   1806 ರಲ್ಲಿ ಲಂಡನ್‌ನಲ್ಲಿ ಜನಿಸಿದನು.

3. ಜೆ.ಎಸ್.ಮಿಲ್‌ನ ತಂದೆಯ ಹೆಸರೇನು?

   ಜೇಮ್ಸ್ ಮಿಲ್

4. ಜೆ.ಎಸ್.ಮಿಲ್‌ನ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಯಾರು?

   ಜೆರ್ಮಿಬೆಂಥಾಮ್, ವಡ್ಸ್ವತ್, ಕೋಲ್‌ರಿಚ್

5. ಉಪಯುಕ್ತತಾವಾದ ಎಂದರೇನು?

   - ಅತ್ಯಧಿಕ ಜನರ ಅತ್ಯಧಿಕ ಸುಖ
   - ವೈಯಕ್ತಿಕ ಸುಖಕ್ಕಿಂತ ಸಾಮೂಹಿಕ ಸುಖ ಒಳ್ಳೆಯದು.

6. ಜೆ.ಎಸ್.ಮಿಲ್ ಆರಂಭದಲ್ಲಿ ಯಾವ ಸಿದ್ಧಾಂತದಿಂದ ಪ್ರಭಾವಿತಗೊಂಡಿದ್ದಾನೆ?

   ಉಪಯುಕ್ತತಾವಾದ ಸಿದ್ಧಾಂತದಿಂದ ಪ್ರಭಾವಿತನಾಗಿದ್ದಾನೆ.

7. ಉಪಯುಕ್ತತ ವಾದದ ಪ್ರತಿಪಾದಕರು ಯಾರು?

   ಜೆರ್ಮಿಬೆಂಥಾಮ್, ಕೋಲ್‌ರಿಚ್.

8. ಜೆ.ಎಸ್. ಮಿಲ್‌ನು ಪ್ರತಿಪಾದಿಸಿದ ಸಿದ್ಧಾಂತ ಯಾವುದು?

   - ಉಪಯುಕ್ತತಾವಾದ.
   - ಸ್ವಾತಂತ್ರ್ಯದ ಬಗ್ಗೆ ವಿಚಾರಗಳು
   - ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಹಕ್ಕುಗಳು.

9. ಜೆ.ಎಸ್.ಮಿಲ್ ಯಾವ ಕಂಪನಿಯಲ್ಲಿ ಯಾವ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದನು?

   ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಚೀಫ್ ಎಕ್ಸ್‌ಮಿನರ್ ಆಫ್ ಕರೆಸ್ಪಾಂಡೆನ್ಸ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದನು.

10. ಜೆ.ಎಸ್.ಮಿಲ್ ಸಂಸತ್ತಿನ ಯಾವ ಸದನದ ಸದಸ್ಯನಾಗಿದ್ದ?

1858 ರಿಂದ 1868ರ ವರೆಗೆ ಇಂಗ್ಲೇಂಡಿನ ಸಂಸತ್ತಿನ ಸಾಮಾನ್ಯ ಸಭೆಯ ಸದಸ್ಯನಾಗಿದ್ದ.

11. ಜೆ.ಎಸ್.ಮಿಲ್ ಯಾವಾಗ ಮತ್ತು ಎಲ್ಲಿ ನಿಧನ ಹೊಂದಿದ?

1873ರಲ್ಲಿ ಫ್ರಾನ್ಸ್‌ನ ಅವಿಗ್ನಾನ್ ಎಂಬಲ್ಲಿ ಮರಣ ಹೊಂದಿದ.

12. ಜೆ.ಎಸ್.ಮಿಲ್ ತಿಳಿಸಿದ ಜೀವನದ ಎರಡು ಮುಖಗಳಾವುವು?

ಸ್ವಯಂಗೆ ಸಂಬಂಧಿಸಿದುದು, ಅನ್ಯರಿಗೆ ಸಂಬಂಧಿಸಿದುದು.

13. ಜೆ.ಎಸ್.ಮಿಲ್ ಪ್ರತಿಪಾದಿಸಿದ ಸಿದ್ಧಾಂತ ಯಾವುದು?

ವ್ಯಕ್ತಿವಾದ ಸಿದ್ಧಾಂತ

14. ಜೆ.ಎಸ್.ಮಿಲ್ ಪ್ರತಿಪಾದಿಸಿದ ವಿಚಾರಗಳಾವುವು?

- ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯ.
- ಮಹಿಳೆಯ ಹಕ್ಕುಗಳ ಬಗ್ಗೆ.
- ಅಲ್ಪ ಸಂಖ್ಯಾತರ ಬಗ್ಗೆ.
- ಪ್ರಮಾಣವಾರು ಪ್ರಾತಿನಿಧ್ಯ.

15. ಕಾರ್ಲ್‌ಮಾರ್ಕ್ಸ್ ಎಲ್ಲಿ ಜನಿಸಿದನು.
ಜರ್ಮನಿಯ ಟ್ರಿಯರ್ ಎಂಬಲ್ಲಿ ಜನಿಸಿದನು.
16. ಕಾರ್ಲ್‌ಮಾರ್ಕ್ಸ್‌ನ ಕಾಲವನ್ನು ಬರೆಯಿರಿ?
ಕ್ರಿ.ಶ.1818–1883.
17. ಕಾರ್ಲ್ಸ್‌ಮಾರ್ಕ್ಸ್ ಯಾವ ಪತ್ರಿಕೆಯ ಸಂಪಾದಕನಾಗಿದ್ದನು?
ರೇನಿಷ್‌ಟೈಮ್ಸ್ ಪತ್ರಿಕೆಯ ಸಂಪಾದಕನಾಗಿದ್ದನು.
18. ಕಾರ್ಲ್ಸ್‌ಮಾರ್ಕ್ಸ್‌ನ ಸ್ನೇಹಿತರು ಯಾರು? ಅವನ ಜೊತೆಗೂಡಿ ಪ್ರಕಟಿಸಿದ ಗ್ರಂಥ ಯಾವುದು?
ಫೆಡ್ರಿಕ್ ಏಂಜೆಲ್ಸ್ ಎಂಬ ಸ್ನೇಹಿತನ ಜೊತೆಗೂಡಿ ಕಮ್ಯೂನಿಸ್ಟ್ ಮ್ಯಾನಿ ಪ್ಯಾಸ್ಟೋ ಎಂಬ ಪುಸ್ತಕ ಪ್ರಕಟಿಸಿದ.
19. ಕಂಮ್ಯೂನಿಸಮ್‌ನ ಬೈಬಲ್ ಎಂದು ಯಾವ ಗ್ರಂಥಕ್ಕೆ ಕರೆಯಲಾಗಿದೆ?
ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ ಇದನ್ನು ಕಂಮ್ಯೂನಿಸಮ್‌ನ ಬೈಬಲ್ ಪ್ರಣಾಳಿಕೆ ಎಂದು ಕರೆಯುತ್ತಾರೆ.
20. ವೈಜ್ಞಾನಿಕ ಸಮಾಜವಾದದ ಪಿತಾಮಹ ಯಾರು?
ವೈಜ್ಞಾನಿಕ ಸಮಾಜವಾದದ ಪಿತಾಮಹ ಕಾರ್ಲ್‌ಮಾರ್ಕ್ಸ್
21. ಧರ್ಮವನ್ನು ಕಾರ್ಲ್‌ಮಾರ್ಕ್ಸ್ ಏನೆಂದು ಕರೆದಿದ್ದಾನೆ?
ಧರ್ಮವನ್ನು ಕಾರ್ಲ್‌ಮಾರ್ಕ್ಸ್ ಅಫೀಮು ಎಂದು ಕರೆದಿದ್ದಾನೆ.
22. ಕಾರ್ಲ್‌ಮಾರ್ಕ್ಸ್‌ನು ಯಾವಾಗ ಎಲ್ಲಿ ನಿಧನ ಹೊಂದಿದ?
ಕ್ರಿ.ಶ. 1883 ರಲ್ಲಿ ಲಂಡನ್‌ನಲ್ಲಿ ನಿಧನ ಹೊಂದಿದ.
23. ಕಾರ್ಲ್‌ಮಾರ್ಕ್ಸ್ ಸ್ಥಾಪಿಸಿದ ಸಂಘ ಯಾವುದು?
1865 ರಲ್ಲಿ ಅಂತರಾಷ್ಟ್ರೀಯ ಕೂಲಿಕಾರರ ಸಂಘ ಸ್ಥಾಪಿಸಿದ.
24. ಪ್ರಥಮ ಅಂತರಾಷ್ಟ್ರೀಯ ಸಮಾಜವಾದಿ ಯಾರು?
ಕಾರ್ಲ್‌ಮಾರ್ಕ್ಸ್
25. ಮಾರ್ಕ್ಸ್ ವಿಶ್ವದ ಕಾರ್ಮಿಕರಿಗೆ ಏನೆಂದು ಕರೆ ನೀಡಿದ್ದಾನೆ?

ವಿಶ್ವದ ಕಾರ್ಮಿಕರೇ ಒಂದಾಗಿ, ಗುಲಾಮ ಗಿರಿಯ ಸಂಕೋಲೆಯ ಹೊರತು ನೀವೇನನ್ನು ಕಳೆದುಕೊಳ್ಳವುದಿಲ್ಲ ಎಂದು ಕರೆ ನೀಡಿದ್ದಾನೆ.

26. ಕಾರ್ಲ್‌ಮಾರ್ಕ್ಸ್‌ನ ಮೇಲೆ ಪ್ರಭಾವ ಬೀರಿದ ಚಿಂತಕರುಗಳು ಯಾರು?

ಸೆಂಟ್‌ಸೈಮನ್, ರಾಬರ್ಟ್ ಓವನ್, ಜೆ.ಡಿ.ಹೆಚ್.ಕೊಲೆ ಮುಂತಾದವರು.

27. ಸಮಾತಾವಾದದ ತ್ರಿಮೂರ್ತಿಗಳೆಂದರೆ ಯಾರು?

- ಮಾರ್ಕ್ಸ್– ಏಂಜಲ್ಸ್ – ಲೆನಿನ್
- ಮಾರ್ಕ್ಸ್–ಮಾವೋ–ಸ್ಟಾಲಿನ್.

28. ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವನ್ನು ಯಾವ ದೇಶದಲ್ಲಿ ಯಾರು ಜಾರಿಗೆ ತಂದಿದ್ದಾರೆ?

ರಷ್ಯಾದಲ್ಲಿ ಲೆನಿನ್ ಮತ್ತು ಸ್ಟಾಲಿನ್ ಮತ್ತು ಚೀನಾದಲ್ಲಿ ಮಾವೋ.

29. ಗಾಂಧೀಜಿಯ ಜನ್ಮಸ್ಥಳ ಮತ್ತು ಕಾಲ ತಿಳಿಸಿ.

ಗುಜರಾತಿನ ಪೋರಬಂದರ್ ಗಾಂಧೀಜಿಯವರ ಜನ್ಮಸ್ಥಳ. ಇವರ ಕಾಲ 02.10.1869 ರಿಂದ 30.01.1948.

30. ಗಾಂಧಿವಾದ ಎಂದರೇನು?

ಗಾಂಧೀಜಿಯವರ ವಿಚಾರಧಾರೆಗಳ ಅಧ್ಯಯನವೇ ಗಾಂಧೀವಾದ.

31. ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಯಾರು?

ಡೇವಿಡ್ ಥೋಡೋ, ರಸ್ಕಿನ್, ಲಿಯೋಟಾಲ್ಸ್‌ಟಾಯ್, ಮುಂತಾದವರು.

32. ಗಾಂಧೀಜಿಯವರ ಆತ್ಮಚರಿತ್ರೆಯನ್ನು ಏನೆಂದು ಕರೆಯುತ್ತಾರೆ?

ಸತ್ಯಾನ್ವೇಷಣೆಯಲ್ಲಿ ನನ್ನ ಅನುಭವಗಳು.

33. ಗಾಂಧೀಜಿಯವರು ವರ್ಣಭೇದ ನೀತಿಯ ವಿರುದ್ಧ ಯಾವ ರಾಷ್ಟ್ರದಲ್ಲಿ ಹೋರಾಡಿದರು?

ದಕ್ಷಿಣ ಆಫ್ರಿಕಾ

34. ಗಾಂಧೀಜಿಯವರು ಯಾವಾಗ ನಿಧನರಾದರು?

30 ರ ಜನವರಿ 1948 ರಂದು ನಿಧನರಾದರು.

35. ಗಾಂಧೀಜಿಯವರನ್ನು ಹತ್ಯೆಗೈದವರಾರು?

ನಾಥುರಾಮ್ ಗೂಡ್ಸೆ.

36. ರಾಷ್ಟ್ರಪಿತ ಯಾರು?

ಮಹಾತ್ಮ ಗಾಂಧೀಜಿ.

37. ಗಾಂಧೀಜಿಯವರ ತಂದೆ–ತಾಯಿ ಯಾರು?

ತಂದೆ–ಕರಮಚಂದ ಗಾಂಧಿ, ತಾಯಿ–ಪುತಲೀಬಾಯಿ.

38. ಸರ್ವೋದಯದ ಪ್ರಚಾರಕರು ಯಾರು?

ಕಾ ಕಾ ಕಾಲೇಲೆಕರ್, ಜಯಪ್ರಕಾಶ್ ನಾರಾಯಣ್, ವಿನೋಭಾ ಭಾವೆ.

39. ರಾಜ್ಯದ ಬಗ್ಗೆ ಗಾಂಧೀಜಿಯವರ ಅಭಿಪ್ರಯವೇನು?

ರಾಜ್ಯ ಒಂದು ಅನಿವಾರ್ಯ ಪೀಡೆ ಎಂದಿದ್ದಾರೆ. ಗಾಂಧೀಜಿಯವರು ಗ್ರಾಮ ಸ್ವರಾಜ್ಯಗಳನ್ನು ಪ್ರತಿಪಾದಿಸಿದರು.

40. ಸತ್ಯಾಗ್ರಹದ ಮೂಲ ತತ್ವಗಳೇನು?

ಸತ್ಯ ಮತ್ತು ಅಹಿಂಸೆ ಸತ್ಯಾಗ್ರಹದ ಮೂಲ ತತ್ವಗಳು.

41. ಗಾಂಧೀಜಿಯವರು ಆರಂಭಿಸಿದ ಪತ್ರಿಕೆಗಳಾವುವು?

ಹರಿಜನ, ಇಂಡಿಯನ್ ಒಪಿನಿಯನ್

42. ಅಂಬೇಡ್ಕರ್‌ರವರ ಜನ್ಮಸ್ಥಳ, ಕಾಲ ಬರೆಯಿರಿ.

ಮಹಾರಾಷ್ಟ್ರದ ಮೆಹೋ ಎಂಬಲ್ಲಿ 1891 ಏಪ್ರಿಲ್ 14 ರಂದು ಜನಿಸಿದರು.

43. ಅಂಬೇಡ್ಕರ್ ರವರ ತಂದೆ–ತಾಯಿಯ ಹೆಸರೇನು?

ತಂದೆ–ರಾಮ್‌ಜೀ, ತಾಯಿ–ಭೀಮಾಬಾಯಿಯವರ 14ನೇ ಮಗ ಅಂಬೇಡ್ಕರ್

44. ಅಂಬೇಡ್ಕರ್ ಯಾವ ಸಮುದಾಯಕ್ಕೆ ಸೇರಿದ್ದಾರೆ?

ಅಂಬೇಡ್ಕರ್ ಮೆಹರ್ ಎಂಬ ಅಸ್ಪೃಶ್ಯ ಜಾತಿಗೆ ಸೇರಿದ್ದಾರೆ.

45. ಅಂಬೇಡ್ಕರ್ ರವರ ಮೂಲ ಹೇಸರೇನು?

ಅಂಬೆವಾಡೇಕರ್.

46. ದಲಿತ ಸೂರ್ಯನೆಂದು ಯಾರನ್ನು ಕರೆಯುತ್ತಾರೆ?

ಡಾ॥ ಬಿ.ಆರ್.ಅಂಬೇಡ್ಕರ್ ಅವರನ್ನು

47. ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಯಾವ ವಿಶ್ವವಿದ್ಯಾಲಯದಿಂದ ಪಾಸು ಮಾಡಿದರು?

ಮುಂಬೈ ವಿಶ್ವವಿದ್ಯಾಲಯದಿಂದ.

48. ಅಂಬೇಡ್ಕರ್‌ರವರಿಗೆ ಉನ್ನತ ವ್ಯಾಸಾಂಗ ಮಾಡಲು ಯಾರು ಸಹಾಯ ಮಾಡಿದರು?

ಬರೋಡಾದ ಮಹಾರಾಜರು.

49. ಅಂಬೇಡ್ಕರ್‌ರವರು ಯಾವ ಪ್ರಬಂಧಕ್ಕಾಗಿ ಪಿ.ಹೆಚ್.ಡಿ. ಪದವಿ ಪಡೆದರು?

"The Evaluation of Provincial Finance in India"

50. ಅಂಬೇಡ್ಕರ್‌ರವರು ದಲಿತ ಜನಾಂಗದ ಉದ್ಧಾರಕ್ಕಾಗಿ ಯಾವ ಸಂಸ್ಥೆಯನ್ನು ಸ್ಥಾಪಿಸಿದರು?

1924ರಲ್ಲಿ ಬಹಿಷ್ಕೃತ ಹಿತರಕ್ಷಣಾ ಸಭೆ.

51. ಅಂಬೇಡ್ಕರ್ ರವರು ಯಾವ ಪತ್ರಿಕೆಗಳನ್ನು ಸ್ಥಪಿಸಿದರು?

ಬಹಿಷ್ಕೃತ ಭಾರತ, ಸಮತ, ಜನತಾ ಎಂಬ ಪಾಕ್ಷಿಕಗಳನ್ನು ಸ್ಥಾಪಿಸಿದರು.

52. ಅಂಬೇಡ್ಕರ್ ಯಾರ ಮಂತ್ರಿಮಂಡಲದಲ್ಲಿ ಯಾವ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು?

ನೆಹರೂರವರ ಹಂಗಾಮಿ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದರು.

53. ಅಂಬೇಡ್ಕರ್‌ರವರು ಯಾವ ಪ್ರಾಂತದಿಂದ ಸಂವಿಧಾನ ರಚನಾ ಸಭೆಗೆ ಆಯ್ಕೆಯಾದರು?

1946ರಲ್ಲಿ ಬಂಗಾಳ ಪ್ರಾಂತದಿಂದ ಆಯ್ಕೆಯಾದರು.

54. ಅಂಬೇಡ್ಕರ್ ಯಾವ ಧರ್ಮಕ್ಕೆ ಮತಾಂತರಗೊಂಡರು?

ಬೌದ್ಧ ಧರ್ಮಕ್ಕೆ.

55. ಅಂಬೇಡ್ಕರ್ ಯಾವಾಗ ನಿಧನ ಹೊಂದಿದರು?

1956 ರ ಡಿಸೆಂಬರ್ 6ರಂದು ನಿಧನ ಹೊಂದಿದರು.

56. ಭಾರತ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರು ಯಾರು?

ಡಾ॥ ಬಿ.ಆರ್.ಅಂಬೇಡ್ಕರ್

57. ಅಂಬೇಡ್ಕರ್ ಕಟ್ಟಿದ ಪಕ್ಷ ಯಾವುದು?

ಇಂಡಿಪೆಂಡೆಂಟ್ ಲೇಬರ್ ಪಕ್ಷ.

58. ಭಾರತ ಸಂವಿಧಾನದ ಶಿಲ್ಪಿ ಎಂದು ಯಾರನ್ನು ಕರೆಯುತ್ತಾರೆ?

ಡಾ॥ ಬಿ.ಆರ್.ಅಂಬೇಡ್ಕರ್ ಅವರನ್ನು.

59. ಅಂಬೇಡ್ಕರ್ ಸ್ಥಾಪಿಸಿದ ಬಹಿಷ್ಕೃತರ ಹಿತರಕ್ಷಣ ಸಭೆಯ ಉದ್ದೇಶವೇನು?

ದಲಿತರಿಗೆ ಅಧ್ಯಯನಕ್ಕೆ ಗ್ರಂಥಾಲಯ ಸ್ಥಾಪನೆ, ದಲಿತರಿಗೆ ಕೈಗಾರಿಕೆ ಕೃಷಿ, ಶಾಲೆ ತೆರೆಯುವುದಾಗಿತ್ತು.

60. ಅಂಬೇಡ್ಕರ್ ಯಾವ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದರು?

1931 ರಲ್ಲಿ ಲಂಡನ್‌ನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದರು.

ಎರಡು ಅಂಕದ ಪ್ರಶ್ನೆಗಳು ಮತ್ತು ಉತ್ತರಗಳು :–

1. **ಜೆ.ಎಸ್.ಮಿಲ್‌ನ ಕೃತಿಗಳನ್ನು ಹೆಸರಿಸಿ.**
   - ಆನ್ ಲಿಬರ್ಟಿ
   - ರೆಪ್ರಸೆಂಟೀಟಿವ್ ಗಾರ್ನಮೆಂಟ್
   - ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಎಕಾನಮಿ.
   - ಉಪಯುಕ್ತತಾವಾದ
   - ಸಬ್‌ಜೆಕ್ಸನ್ ಆಫ್ ವುಮೆನ್.
2. **ಜೆ.ಎಸ್.ಮಿಲ್ ಪ್ರತಿಪಾದಿಸಿದ ಸಿದ್ಧಾಂತ ಯಾವುದು**?
   - ಉಪಯುಕ್ತತಾವಾದ
   - ಸ್ವಾತಂತ್ರ್ಯದ ಬಗ್ಗೆ ವಿಚಾರಗಳು
   - ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಹಕ್ಕುಗಳು.
3. **ಜೆ.ಎಸ್.ಮಿಲ್ ಪ್ರತಿಪಾದಿಸಿದ ವಿಚಾರಗಳಾವುವು**?
   - ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯ
   - ಮಹಿಳೆಯ ಹಕ್ಕುಗಳ ಬಗ್ಗೆ.
   - ಅಲ್ಪಸಂಖ್ಯಾತರ ಬಗ್ಗೆ.
4. **ತನಗೆ ಸಂಬಂಧಿಸಿದ ಚಟುವಟಿಕೆ ಎಂದರೇನು**?

   ವ್ಯಕ್ತಿಯ ಮನಸ್ಸು–ಶರೀರಕ್ಕೆ ಸಂಬಂಧಿಸಿದ ಅಂತರಂಗಪ್ರಜ್ಞೆ, ವಿಚಾರ ಸ್ವಾತಂತ್ರ್ಯ, ಅಭಿಪ್ರಾಯ ಇವುಗಳಿಗೆ ಸ್ವಯಂಗೆ ಸಂಬಂಧಿಸಿದ ಕ್ರಿಯೆಗಳು (Self Regard) ಎಂದು ಕರೆಯುತ್ತೇವೆ. ಸರ್ಕಾರ ಇವುಗಳಿಗೆ ಧಕ್ಕೆ ಉಂಟು ಮಾಡಬಾರದು ಇದು ವ್ಯಕ್ತಿಯ ಸ್ವಾತಂತ್ರ್ಯ. ಇದರಲ್ಲಿ ರಾಜ್ಯ ಹಸ್ತಕ್ಷೇಪ ಮಾಡಬಾರದು ಎಂದು ಜೆ.ಎಸ್.ಮಿಲ್ ಅಭಿಪ್ರಾಯ ಪಡುತ್ತಾನೆ.
5. **ಇತರರಿಗೆ ಸಂಬಂಧಿಸಿದ ಕ್ರಿಯೆಗಳು ಎಂದರೇನು**?

   ವ್ಯಕ್ತಿ ಸಮಾಜದೊಂದಿಗೆ ಹೊಂದಿರುವ ಸಂಬಂಧವೇ ಇತರರಿಗೆ ಸಂಬಂಧಿಸಿದುದು (Others Regard). ವ್ಯಕ್ತಿಯ ಚಟುವಟಿಕೆಗಳು ಅನ್ಯ ವ್ಯಕ್ತಿಗಳಿಗೆ ತೊಂದರೆ ಉಂಟು ಮಾಡುತ್ತಿದ್ದರೆ ಅಂತಹ ಚಟುವಟಿಕೆಗಳಲ್ಲಿ ರಾಜ್ಯ ಹಸ್ತಕ್ಷೇಪ ಮಾಡಿ ನಿಯಂತ್ರಿಸಬೇಕು ಎಂದು ಜೆ.ಎಸ್.ಮಿಲ್ ಅಭಿಪ್ರಾಯ ಪಡುತ್ತಾನೆ.
6. **ಅಲ್ಪ ಸಂಖ್ಯಾತರ ಪ್ರಾತಿನಿಧ್ಯ ಎಂದರೇನು**?

   ಪ್ರಜಾಪ್ರಭುತ್ವದಲ್ಲಿ ಬಹುಮತ ಪಡೆದ ವ್ಯಕ್ತಿ ಆಯ್ಕೆಯಾಗುತ್ತಾನೆ. ಅಲ್ಪಮತ ಪಡೆದವರು ಆಯ್ಕೆಯಾಗುವುದಿಲ್ಲ. ಅವರಿಗೆ ಶಾಸನ ಸಭೆಯಲ್ಲಿ ಪ್ರಾತನಿಧ್ಯವಿರಬೇಕೆಂದು ಜೆ.ಎಸ್.ಮಿಲ್ ಅಭಿಪ್ರಾಯ ಪಡುತ್ತಾನೆ.
7. **ಪ್ರಮಾಣವಾರು ಪ್ರಾತಿನಿಧ್ಯ ಎಂದರೇನು**?

   ಈ ಕಲ್ಪನೆಯನ್ನು ಮೂಲತಃ ಜೆ.ಎಸ್.ಮಿಲ್ ಪ್ರತಿಪಾದಿಸುತ್ತಾನೆ. ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಬಗ್ಗೆ ವಿವರಿಸುವಾಗ ಇದನ್ನು ಬಳಸುತ್ತಾನೆ. ಅವರು ಹೊಂದಿರುವ ಜನಸಂಖ್ಯೆ ಆಧಾರದ ಮೇಲೆ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ನೀಡಬೇಕು. ಅಲ್ಪಸಂಖ್ಯಾತರನ್ನು ಬಹುಸಂಖ್ಯಾತರ ದಬ್ಬಾಳಿಕೆಯಿಂದ ರಕ್ಷಿಸಲು ಪ್ರಮಾಣವಾರು ಪ್ರಾತಿನಿಧ್ಯ ಪ್ರತಿನಿಧಿಸಿದ್ದಾನೆ.
8. **ಕಾರ್ಲ್‌ಮಾರ್ಕ್ಸ್‌ನ ಕೃತಿಗಳ ಬಗ್ಗೆ ಬರೆಯಿರಿ**?

- ಕಮ್ಯೂನಿಷ್ಟ್ ಮ್ಯಾನಿಪೆಸ್ಟೋ.
- ದಾಸ್ ಕ್ಯಾಪಿಟಲ್.
- ಫಿಲಾಸಫಿ ಆಫ್ ಪಾವರ್ಟಿ.
- ಅಧಿಕ ಮೌಲ್ಯ ಸಿದ್ಧಾಂತ.

9. **ಮಿಲ್ ಪ್ರತಿಪಾದಿಸಿದ ಸ್ವಾತಂತ್ರ್ಯಗಳಾವುವು?**
   - ಆತ್ಮಸಾಕ್ಷಿಯ ಸ್ವಾತಂತ್ರ್ಯ.
   - ಚಿಂತನೆ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯ
   - ಅಭಿರುಚಿ ಮತ್ತು ಸಂಘ ಸಂಸ್ಥೆ ಸ್ವಾತಂತ್ರ್ಯ
   - ಧಾರ್ಮಿಕ–ನೈಟಿಕ ಸ್ವಾತಂತ್ರ್ಯ. ಉದ್ಯೋಗದ ಸ್ವಾತಂತ್ರ್ಯ.

10. **ಕಮ್ಯೂನಿಸಮ್ ಎಂದರೇನು?**

    ಶೋಷಣೆರಹಿತ, ವರ್ಗರಹಿತ, ರಾಜ್ಯರಹಿತ ಹಾಗೂ ಸಮಾನತೆಯ ತತ್ವನ್ನಾಧರಿಸಿದ ಸಮಾಜ ಸ್ಥಾಪನೆಯ ಉದ್ದೇಶವನ್ನುಳ್ಳ ಈ ಸಿದ್ಧಾಂತ ಬಂಡವಳಾಶಾಹಿ ಮತ್ತು ಖಾಸಗಿ ಒಡೆತನವನ್ನು ವಿರೋಧಿಸುತ್ತದೆ. ಕಾರ್ಮಿಕರನ್ನು ಶೋಷಣೆಯಿಂದ ಮುಕ್ತಗೊಳಿಸಲು ಕ್ರಾಂತಿಕಾರಿಕ ಹಿಂಸಾತ್ಮಕ ಚಳುವಳಿಯ ಮೂಲಕ ಗುರಿಸಾಧನೆ ಉದ್ದೇಶ ಹೊಂದಿದೆ.

11. **ಐತಿಹಾಸಿಕ ಭೌತಿಕವಾದದ ಅರ್ಥವನ್ನು ವಿವರಿಸಿ.**

    ಕಾರ್ಲ್‌ಮಾರ್ಕ್ಸ್‌ರು ದ್ವಂದ್ವಾತ್ಮಕ ಭೌತಿಕವಾದವನ್ನು ಇತಿಹಾಸಕ್ಕೆ ಹೋಲಿಸಿದ್ದಾರೆ. ಉಳ್ಳವರು ಮತ್ತು ಉಳ್ಳದವರ ಮಧ್ಯೆ ನಡೆಯುವ ಸಂಘರ್ಷದ ಅಧ್ಯಯನವೇ ಇತಿಹಾಸವೆಂದು ವಿವರಿಸುತ್ತಾರೆ. ಶ್ರೀಮಂತರು ಬಡವರ ಶೋಷಣೆಯ ಇತಿಹಾಸದ ಅಧ್ಯಯನವಾಗಿದೆ.

12. **ವರ್ಗಸಂಘರ್ಷ ವಿವರಿಸಿ.**

    ಕಾರ್ಲ್‌ಮಾರ್ಕ್ಸ್ ಇತಿಹಾಸವನ್ನು ವರ್ಗ ಸಂಘರ್ಷವೆನ್ನುತ್ತಾನೆ. ಶ್ರೀಮಂತರು ಮತ್ತು ಬಡವರ ನಡುವೆ ಇತಿಹಾಸದ ಎಲ್ಲಾ ಕಾಲದಲ್ಲಿಯು ವರ್ಗಸಂಘರ್ಷ ಇದ್ದೆ ಇದೆ. ಬಡವರು ಶೋಷಣೆಗೆ ಒಳಗಾಗುತ್ತಾರೆ. ಕೆಲ ಸಮಯದ ನಂತರ ಶೋಷಿತರೆಲ್ಲರು ಒಟ್ಟಾಗಿ ಸಂಘರ್ಷಕ್ಕೆ ಇಳಿಯುತ್ತಾರೆ. ಇದು ಕ್ರಾಂತಿಯ ರೂಪ ಪಡೆದು ಶ್ರೀಮಂತರು ನಾಶವಾಗುತ್ತಾರೆ.

13. **ಧರ್ಮದ ಬಗ್ಗೆ ಮಾರ್ಕ್ಸ್‌ನ ಅಭಿಪ್ರಾಯವೇನು?**

    ಸಮತಾವಾದ ಧರ್ಮ ವಿರೋಧಿಯಾಗಿದೆ. ಧರ್ಮ ಕಾರ್ಮಿಕರನ್ನು ಶೋಷಣೆ ಮಾಡುತ್ತದೆ. ಇದು ಒಂದು ರೀತಿಯ ಅಫೀಮು ಇದ್ದಂಥೆ. ಧರ್ಮ ಬೋಧನೆಯನ್ನು ಶೋಷಣೆಗೆ ಬಳಸುತ್ತಾರೆಂದು, ಅನ್ಯಾಯ ಅಸಮಾನತೆಗೆ ಧರ್ಮವೇ ಕಾರಣ ಎಂದು ಪ್ರತಿಪಾದಿಸುತ್ತಾನೆ.

14. **ಕಾರ್ಮಿಕರ ಸರ್ವಾಧಿಕಾರ ಎಂದರೇನು?**

    ಶ್ರೀಮಂತರು ಮತ್ತು ಬಡವರ ನಡುವೆ ವರ್ಗ ಸಂಘರ್ಷ ನಡೆದು ಕ್ರಾಂತಿಯ ನಂತರ ಶ್ರೀಮಂತರು ಪೂರ್ಣ ನಾಶವಾಗುತ್ತಾರೆ. ಕಾರ್ಮಿಕರ ಆಡಳಿತ ಅಸ್ಥಿತ್ವಕ್ಕೆ ಬರುತ್ತದೆ. ಸಮಾತವಾದ ರೂಪುಗೊಂಡು ಕಾರ್ಮಿಕರ ಸರ್ವಾಧಿಕಾರ ಸ್ಥಾಪನೆಯಾಗುತ್ತದೆ. ಕಾರ್ಮಿಕರ ಸರ್ವಾಧಿಕಾರ ಶಾಶ್ವತ ಸ್ಥಿತಿಯಾಗಿರದೆ ರಾಜ್ಯ ರಹಿತ ಮತ್ತು ವರ್ಗ ರಹಿತ ಸಮಾಜ ಅಸ್ತಿತ್ವಕ್ಕೆ ಬರುವವರೆಗೆ ಮಾತ್ರ ಅಸ್ತಿತ್ವದಲ್ಲಿರುತ್ತದೆ.

15. **ಸಮಾತವಾದದ ಲಕ್ಷಣಗಳನ್ನು ಬರೆಯಿರಿ? ಅಥವಾ ಕಾರ್ಲ್‌ಮಾರ್ಕ್ಸ್ ಸಿದ್ಧಾಂತವನ್ನು ವಿಮರ್ಶಾತ್ಮಕವಾಗಿ ವಿವರಿಸಿ.**
    - ದ್ವಂದ್ವಾತ್ಮಕ ಬೌತಿಕವಾದ.
    - ಐತಿಹಾಸಿಕ ಭೌತಿಕವಾದ.
    - ಅಧಿಕ ಮೌಲ್ಯಸಿದ್ಧಾಂತ.
    - ವರ್ಗಕಲಹ.

- ಕಾರ್ಮಿಕರ ಸರ್ವಾಧಿಕಾರ.
- ರಾಜ್ಯದಲಯ.
- ಸಮತಾವಾದದ ವಿಮರ್ಶೆ.

16. **ಸರ್ವೋದಯ ಎಂದರೇನು**?

ಎಲ್ಲರ ಅಭಿವೃದ್ಧಿ, ಒಬ್ಬನು ಎಲ್ಲರಿಗಾಗಿ, ಎಲ್ಲರು ಒಬ್ಬನಿಗಾಗಿ, ವರ್ಗರಹಿತ ಶೋಷಣೆರಹಿತ, ಸಮಾಜದ ನಿರ್ಮಾಣವೇ ಸರ್ವೋದಯದ ಗುರಿಯಾಗಿದೆ.

17. **ಸತ್ಯಾಗ್ರಹ ಎಂದರೇನು**?

ಅನ್ಯಾಯ, ಶೋಷಣೆ, ದೌರ್ಜನ್ಯ, ದಬ್ಬಾಳಿಕೆ ಮುಂತಾದ ಅನ್ಯಾಯಗಳ ವಿರುದ್ಧ ಹೋರಾಡುವ ಶಕ್ತಿಶಾಲಿ ನೈತಿಕ ಸಾಧನವೇ ಸತ್ಯಾಗ್ರಹ, ಸತ್ಯಕ್ಕಾಗಿ ಆಗ್ರಹಿಸುವುದೇ ಸತ್ಯಾಗ್ರಹ, ಇದು ಅಹಿಂಸಾತ್ಮಕ ಮತ್ತು ಶಾಂತಿಯುತ ಹೋರಾಟವಾಗಿದೆ.

18. **ಅಸಹಕಾರ ಎಂದರೇನು**?

ತಾನು ಮಾಡುತ್ತಿರುವ ಅನ್ಯಾಯ, ದಬ್ಬಾಳಿಕೆ ವಂಚನೆಗಳನ್ನು ನಿಲ್ಲಿಸಿ ಜನರಿಗೆ ನ್ಯಾಯದೊರೆಯುವವರೆಗೆ ಸರ್ಕಾರಕ್ಕೆ ಯಾವುದೇ ರೀತಿಯ ಸಹಕಾರ ನೀಡದೆ ಅಸಹಕಾರ ಚಳುವಳಿಯ ಮೂಲಕ ಆಡಳಿತ ಯಂತ್ರವನ್ನು ನಿಷ್ಕ್ರಿಯಗೊಳಿಸಿ ಅನ್ಯಾಯವನ್ನು ತಡೆಯುವುದೇ ಅಸಹಕಾರ ಚಳುವಳಿಯೆಂದು ಗಾಂಧೀಜಿ ಅಭಿಪ್ರಾಯ

19. **ಹರತಾಳ ಎಂದರೇನು**?

ಸರ್ಕಾರದ ಅಥವಾ ಯಾವುದೇ ವ್ಯಕ್ತಿ, ಸಂಘ, ಸಂಸ್ಥೆಗಳ ದಬ್ಬಾಳಿಕೆ ಅನ್ಯಾಯದ ವಿರುದ್ಧ ಮಾಡುವ ಶೋಭಾಯಾತ್ರೆ, ಚಳುವಳಿಯನ್ನು ಹರತಾಳವೆಂದು ಕರೆಯುತ್ತೇವೆ.

20. ಸಾಮಾಜಿಕ ಬಹಿಷ್ಕಾರ ಎಂದರೇನು?

ಅನ್ಯಾಯ, ಶೋಷಣೆ ಮಾಡುವವರನ್ನು ಸಮಾಜದ ಚಟುವಟಿಕೆಯಲ್ಲಿ ಭಾಗವಹಿಸದಂತೆ ಬಹಿಷ್ಕಾರ ಹಾಕುವುದಕ್ಕೆ ಸಾಮಾಜಿಕ ಬಹಿಷ್ಕಾರವೆಂದು ಕರೆಯುತ್ತೇವೆ.

21. ಪಿಕೆಟಿಂಗ್ ಎಂದರೇನು?

ಯಾವುದೇ ಹಿಂಸಾತ್ಮಕ ಮಾರ್ಗವನ್ನು ಅನುಸರಿಸದೇ ಶಾಂತಿಯುತವಾಗಿ ಅಧಿಕಾರಿಗಳು ಮತ್ತು ಸರ್ಕಾರ ಕಾರ್ಯನಿರ್ವಯಿಸದಂತೆ ತಡೆಯುವುದೇ ಪಿಕೆಟಿಂಗ್

22. ಕಾನೂನುಭಂಗ ಚಳುವಳಿ ಎಂದರೇನು?

ಸರ್ಕಾರದ ಅನ್ಯಾಯ ಮತ್ತು ದಬ್ಬಾಳಿಕೆಯನ್ನು ವಿರೋಧಿಸಲು ಕಾನೂನನ್ನು ಉಲ್ಲಂಘಿಸುವಂತೆ ಗಾಂಧೀಜಿ ಕರೆ ನೀಡುತ್ತಿದ್ದರು. ಇದೇ ಕಾನೂನು ಬಂಘ ಚಳುವಳಿ.

23. ಹಿಜರತ್ ಎಂದರೇನು?

ವಿರೋಧಿಯ ದಬ್ಬಾಳಿಕೆ ಮತ್ತು ಅನ್ಯಾಯ ಶೋಷಣೆಯಿಂದ ಮುಕ್ತವಾಗಲು ಬೇರೆ ಪ್ರದೇಶಗಳಿಗೆ ವಲಸೆ ಹೋಗುವುದೇ ಹಿಜರತ್.

24. ಮುಷ್ಕರ ಎಂದರೇನು?

ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಬಳಸುವ ಪ್ರತಿಭಟನೆಗೆ ಮುಷ್ಕರ ಎಂದು ಕರೆಯುತ್ತೇವೆ. ಕೆಲಸ ಸ್ಥಗಿತಗೊಳಿಸುವುದು, ಮೆರವಣಿಗೆ, ಘೋಷಣೆ ಕೂಗುವುದು ಒಂದೆಡೆ ಕುಳಿತು ಮುಷ್ಕರ ನಡೆಸುವುದು.

25. ಸತ್ಯ–ಅಹಿಂಸೆಯ ಬಗ್ಗೆ ಬರೆಯಿರಿ?

ಗಾಂಧೀಜಿಯವರು ನಂಬಿಕೊಂಡ ಜೀವನ ಮೌಲ್ಯಗಳು. ಇವು ಗಾಂಧೀಜಿಯವರ ಗುರಿಗೆ ಮಾರ್ಗೋಪಾಯಗಳಾಗಿದ್ದವು.

26. ಗಾಂಧೀಜಿಯವರು ಮಾನವ ಸ್ವಭಾವದ ಬಗ್ಗೆ ಏನೆಂದು ಹೇಳುತ್ತಿದ್ದರು?

ಮಾನವ ಒಳಿತು ಕೆಡುಕುಗಳ ಸಂಗಮ. ಮಾನವನಿಗೆ ಉತ್ತಮ ಶಿಕ್ಷಣ ನೀಡುವುದರಿಂದ, ಉತ್ತಮ ನಾಗರೀಕನನ್ನಾಗಿ ರೂಪಿಸಬಹುದೆಂದು ಗಾಂಧೀಜಿ ನಂಬಿದ್ದರು.

27. ಪಕ್ಷರಹಿತ ರಾಜಕಾರಣ ಎಂದರೇನು?

ಚುನಾವಣೆಯಲ್ಲಿ ಯಾವುದೇ ಪಕ್ಷಗಳು ಭಾಗವಹಿಸದೇ ವ್ಯಕ್ತಿ ಆಧಾರಿತವಾಗಿ ಚುನಾವಣೆ ನಡೆಸುವುದು. ಉದಾ:– ಗಾಮ ಪಂಚಾಯಿತಿ ಚುನಾವಣೆಗಳು ಪಕ್ಷರಹಿತವಾಗಿ ನಡೆಯುತ್ತವೆ.

28. ಅಂಬೇಡ್ಕರ್‌ರವರ ಕೃತಿಗಳ ಬಗ್ಗೆ ಬರೆಯಿರಿ.

- ಅಸ್ಪೃಶ್ಯರು.
- ಭಾರತದಲ್ಲಿ ಜಾತಿ ಪದ್ಧತಿ
- ಗಾಂಧೀ ಮತ್ತು ಗಾಂಧೀವಾದ.
- ಶೂದ್ರರು ಎಂದರೆ ಯಾರು?
- ಬುದ್ಧ, ಆತನ ಧರ್ಮ.
- ಭಾಷಾವಾರು ರಾಜ್ಯಗಳ ಕುರಿತು ವಿಚಾರಗಳು.

29. ಅಂಬೇಡ್ಕರ್ ಎಂದು ಕರೆಯಲು ಕಾರಣವೇನು?

ಇವರ ಮೂಲ ಹೆಸರು ಭೀಮ್‌ರಾಯ್ ರಾಮ್‌ಜೀ ಅಂಬೇವಾಡೇಕರ್. ಇವರ ಗುರುಗಳು ಪ್ರೀತಿಯಿಂದ ಅಂಬೇಡ್ಕರ್ ಎಂದು ಕರೆಯುತ್ತಿದ್ದರು. ಮುಂದೆ ಅದೇ ಶಾಶ್ವರವಾಯಿತು.

30. ಅಂಬೇಡ್ಕರ್ ಉನ್ನತ ಶಿಕ್ಷಣವನ್ನು ಯಾವ ವಿಶ್ವವಿದ್ಯಾಲಯದಲ್ಲಿ ಮಾಡಿದರು?

- ಮುಂಬೈ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ.
- ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಪಿ.ಹೆಚ್.ಡಿ. ಪದವಿ.
- ಲಂಡನ್‌ನಲ್ಲಿ ಎಂ.ಎಸ್.ಸಿ. ಪದವಿ.

31. ಅಂಬೇಡ್ಕರ್ ಅನುಭವಿಸಿದ ತಾರತಮ್ಯ ಯಾವುದು?

ಇವರು ತಮ್ಮ 5ನೇ ವಯಸ್ಸಿನಲ್ಲಿ ಶಾಲೆಗೆ ಸೇರಿದರು. ಶಾಲೆಯಲ್ಲಿ ತಾರತಮ್ಯ ಮಾಡಲಾಯಿತು ಎಲ್ಲಾ ವಿದ್ಯಾರ್ಥಿಗಳ ಜೊತೆಗೆ ಕೂಡಿಸದೇ ಇವರನ್ನು ಪ್ರತ್ಯೇಕವಾಗಿ ಕೂಡಿಸಲಾಗುತ್ತಿತ್ತು. ಯಾವುದೇ ಪಠ್ಯೇತರ ಚಟುವಟಿಕೆಗೆ ಸೇರಿಸುತ್ತಿರಲಿಲ್ಲ. ಕ್ರೀಡೆಗೂ ಸೇರಿಸುತ್ತಿರಲಿಲ್ಲ. ಇದರಿಂದ ಮಾನಸಿಕ ಹಿಂಸೆ ಅನುಭವಿಸಿದರು.

32. ಅಂಬೇಡ್ಕರ್‌ರವರು ದಲಿತರಿಗೆ ಪ್ರತಿಪಾದಿಸಿದ ಪಂಚಸೂತ್ರಗಳು ಯಾವುದು?

1) ಸ್ವಯಂ ಸುಧಾರಣೆ	Self Improvement
2) ಸ್ವಯಂ ಪ್ರಗತಿ	Self Progress
3) ಆತ್ಮಾಭಿಮಾನ	Self Respect
4) ಸ್ವಾವಲಂಬನೆ	Self Dependence
5) ಆತ್ಮ ವಿಶ್ವಾಸ	Self Confidence

33. ಅಂಬೇಡ್ಕರ್ ಸ್ಥಾಪಿಸಿದ ಬಹಿಷ್ಕೃತ ಹಿತರಕ್ಷಣ ಸಭೆಯ ಉದ್ದೇಶ ಬರೆಯಿರಿ.

- ದಲಿತರ ಅಧ್ಯಯನಕ್ಕೆ ಗ್ರಂಥಾಲಯ ಸ್ಥಾಪನೆ, ದಲಿತರಿಗೆ ಕೈಗಾರಿಕೆ ಕೃಷಿ ಶಾಲೆ ತೆರೆಯುವುದು.
- ಸಾಮಾಜಿಕ ಮತ್ತು ಸಾಂಸ್ಕೃತಿಕ ಮಟ್ಟದ ಸುಧಾರಣೆ.
- ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದು.

ಐದು ಮತ್ತು ಹತ್ತು ಅಂಕದ ಪ್ರಶ್ನೆಗಳು ಮತ್ತು ಉತ್ತರಗಳು :–

1) ದ್ವಂದ್ವಾತ್ಮಕ ಭೌತಿಕವಾದ ಎಂದರೇನು?

ಕಾರ್ಲ್‌ಮಾರ್ಕ್ಸ್ ಸಮಾತಾವಾದದ ಸಿದ್ಧಾಂತ ಈ ಸಿದ್ಧಾಂತವನ್ನು ಆಧರಿಸಿದೆ. ಇದನ್ನು ಹೆಗಲ್‌ರವರ ಸಿದ್ದಾಂತದಿಂದ ಪಡೆಯಲಾಗಿದೆ. ಸಮಾಜದಲ್ಲಿ ಪ್ರತಿಯೊಂದು ವಿಷಯವನ್ನು ಪ್ರತಿಪಾದಿಸುವವರ ಒಂದು ಗುಂಪು ಇರುತ್ತದೆ. ಇವರನ್ನು ಪರವಾದಿಗಳೆಂದು ಇದನ್ನು ವಿರೋಧಿಸುವವರ ಗುಂಪು ಇರುತ್ತದೆ. ಅವರನ್ನು ಪ್ರತಿವಾದಿಗಳೆಂದು ಕರೆಯುತ್ತಾರೆ, ಇವೆರಡರ ನಡುವೆ ಸಂಘರ್ಷ ನಡೆದು ಸಮನ್ವಯವಾದ ಹುಟ್ಟಿಕೊಳ್ಳುತ್ತದೆ. ಈ ಪ್ರಕ್ರಿಯೆಯನ್ನು ದ್ವಂದ್ವಾತ್ಮಕ ಭೌತಿಕವಾದವೆಂದು ಕರೆಯುತ್ತೇವೆ. ಇದನ್ನೇ ಕಾರ್ಲ್‌ಮಾರ್ಕ್ಸ್ ಆರ್ಥಿಕ ಶಕ್ತಿಗಳ ನಡುವಣ ಸಂಘರ್ಷವೆಂದು ಕರೆಯುತ್ತಾನೆ. ಉಳ್ಳವರು, ಉಳ್ಳದವರ ನಡುವೆ ಸಂಘರ್ಷ ನಡೆದು ಶ್ರೀಮಂತರು ನಾಶವಾಗಿ, ಸಮನ್ವಯವಾದ ಅಂದರೆ ಸಮತಾವಾದ ಅಸ್ತಿತ್ವಕ್ಕೆ ಬರುತ್ತದೆ ಎಂದು ಅಭಿಪ್ರಾಯಪಡುತ್ತಾನೆ.

2) ಕಾರ್ಮಿಕರ ಸರ್ವಾಧಿಕಾರ ಎಂದರೇನು?

ಶ್ರೀಮಂತರು ಮತ್ತು ಬಡವರ ನಡುವೆ ವರ್ಗ ಸಂಘರ್ಷ ನಡೆದು ಕ್ರಾಂತಿಯ ನಂತರ ಶ್ರೀಮಂತರು ಪೂರ್ಣ ನಾಶವಾಗುತ್ತಾರೆ. ನಂತರ ಕಾರ್ಮಿಕ ಸರ್ವಾಧಿಕಾರ ಸ್ಥಾಪನೆಯಾಗುತ್ತದೆ. ಕಾರ್ಮಿಕರ ಸರ್ವಾಧಿಕಾರ ಶಾಶ್ವತ ಸ್ಥಿತಿಯಾಗಿರದೆ, ರಾಜ್ಯ ರಹಿತ ಮತ್ತು ವರ್ಗ ರಹಿತ ಸಮಾಜ ಅಸ್ತತ್ವಕ್ಕೆ ಬರುವವರೆಗೆ ಮಾತ್ರ ಅಸ್ತತ್ವದಲ್ಲಿರುತ್ತದೆ.

3) ಗಾಂಧೀಜಿಯವರ ರಾಜಕೀಯ ವಿಚಾರಧಾರೆಗಳನ್ನು ವಿವರಿಸಿ.

- ರಾಜ್ಯ ಇದು ಅನಿವಾರ್ಯ ಪೀಡೆ, ಗ್ರಾಮ ಸ್ವರಾಜ್ಯಗಳಿರಬೇಕು.
- ಅಧಿಕಾರ ವಿಕೇಂದ್ರಿಕರಣವನ್ನು ಪ್ರತಿಪಾದಿಸಿದರು.
- ಆರ್ಥಿಕ ವಿಕೇಂದ್ರಿಕರಣ–ಗ್ರಾಮಕೈಗಾರಿಕೆಗಳ ಪ್ರೋತ್ಸಾಹ, ಬೃಹತ್ ಉದ್ದಿಮೆ ವಿರೋಧಿ, ದೇಶಿಯ ಉದ್ದಿಮೆಗಳಿಗೆ ಪ್ರೋತ್ಸಾಹ.
- ಅಪರಾಧಿಕಗಳಿಗೆ ಶಿಕ್ಷೆ ನೀಡುವುದರ ಬದಲು ಶಿಕ್ಷಣ ನೀಡಿ.
- ಗುರಿ ಮತ್ತು ಮಾರ್ಗೋಪಾಯ.
- ಸತ್ಯ ಮತ್ತು ಅಹಿಂಸೆ.
- ಗುರಿ ಮತ್ತು ಸಾಧಿಸುವ ಮಾರ್ಗ ಎರಡು ಶ್ರೇಷ್ಠವಾಗಿರಬೇಕು.
- ಧರ್ಮ–ರಾಜಕಾರಣ ಎರಡು ಸಂಬಂಧವನ್ನು ಹೊಂದಿದೆ.
- ಸತ್ಯಾಗ್ರಹ, ಇವು ಗಾಂಧೀಜಿಯವರ ರಾಜಕೀಯ ವಿಚಾರಗಳು

4) ಸರ್ವೋದಯ ಎಂದರೇನು? ಲಕ್ಷಣಗಳನ್ನು ಬರೆಯಿರಿ.

ಸಮಾಜದ ಎಲ್ಲಾ ಜನರ ಅಭಿವೃದ್ಧಿಯ ಸಿದ್ಧಾಂತವೇ ಸರ್ವೋದಯ ಬಡವರ ಭೌತಿಕ ಅಭಿವೃದ್ಧಿ, ಶ್ರೀಮಂತರ ಆಧ್ಯಾತ್ಮಿಕ ಉನ್ನತಿ ಸಾಧಿಸುವುದೇ ಸರ್ವೋದಯ.

- ರಾಜ್ಯ ರಹಿತ ಸಮಾಜ.
- ಪಕ್ಷ ರಹಿತ ರಾಜಕಾರಣ.
- ನೈತಿಕ ಮೌಲ್ಯಗಳಿಗೆ ಪ್ರಧಾನ್ಯತೆ.
- ಅಧಿಕಾರ ವಿಕೇಂದ್ರಿಕರಣ.
- ಪಕ್ಷ ರಹಿತ ಪ್ರಜಾಪ್ರಭುತ್ವ.
- ಗ್ರಾಮ ಸ್ವರಾಜ್ಯಗಳ ಸ್ಥಾಪನೆ.
- ಸಾಮೂಹಿಕ ಆಸ್ತಿ.
- ಆರ್ಥಿಕ ವಿಕೇಂದ್ರಿಕರಣ.
- ಸಮಾಜದ ಲಕ್ಷಣ.

5) ಗಾಂಧೀಜಿಯವರ ಸತ್ಯಾಗ್ರಹದ ತಂತ್ರಗಳನ್ನು ವಿವರಿಸಿ.

- ಸತ್ಯ ಮತ್ತು ಅಹಿಂಸೆ.
- ಗುರಿ–ಮಾರ್ಗೋಪಾಯ.
- ಅಸಹಕಾರ ಚಳುವಳಿ.
- ಹರತಾಳ.
- ಸಾಮಾಜಿಕ ಬಹಿಷ್ಕಾರ.
- ಪಿಕೆಟಿಂಗ್

- ಸವಿನಯ ಕಾನೂನು ಭಂಗ ಚುಳುವಳಿ.
- ಮುಷ್ಕರ
- ಹಿಜರತ್.
- ಉಪವಾಸ ಸತ್ಯಾಗ್ರಹ ಇವುಗಳು ಗಾಂಧೀಜಿಯವರ ಸತ್ಯಾಗ್ರಹದ ತಂತ್ರಗಳು.

6) ಭಾರತ ಸಂವಿಧಾನದ ರಚನೆಗೆ ಅಂಬೇಡ್ಕರ್ ನೀಡಿದ ಕೊಡುಗೆಯನ್ನು ಕುರಿತು ಬರೆಯಿರಿ.

- 1946 ರಲ್ಲಿ ಬಂಗಾಳ ಪ್ರಾಂತ್ಯದಿಂದ ಭಾರತದ ಸಂವಿಧಾನ ರಚಚನಾ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು.
- ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
- ಶಿಕ್ಷಣ
- ಭಾಷಾವಾರು ಪ್ರಾಂತ್ಯ ರಚನೆ.
- ಹಿಂದೆ ರಾಷ್ಟ್ರ ಭಾಷೆ.
- ಜಾತ್ಯಾತೀತ ರಾಷ್ಟ್ರ.
- ಮೀಸಲಾತಿ.
- ಮೂಲಭೂತ ಹಕ್ಕುಗಳು.
- ರಾಜ್ಯ ನೀತಿ ನಿರ್ದೇಶಕ ತತ್ವಗಳು.
- ಮೂಲಭೂತ ಹಕ್ಕುಗಳ ರಕ್ಷಣೆ.
- ಬಲಿಷ್ಟ ಕೇಂದ್ರ ಸರ್ಕಾರ.
- ಅಸ್ಪೃಶ್ಯತಾ ನಿರ್ಮೂಲನೆ.
- ತುರ್ತು ಪರಿಸ್ಥಿತಿಯ ಅಧಿಕಾರಗಳು.
- ರಾಜ್ಯಪಾಲರ ನೇಮಕ.
- ಒಕ್ಕೂಟ ಸರ್ಕಾರ.
- ರಾಷ್ಟ್ರಪತಿಯವರ ಆಯ್ಕೆ. ಇವುಗಳು ಅಂಬೇಡ್ಕರ್ ಸಂವಿಧಾನ ರಚನೆಗೆ ನೀಡಿದ ಕೊಡುಗೆಗಳಾಗಿವೆ.

7) ದುರ್ಬಲ ವರ್ಗದವರ ಸಬಲೀಕರಣಕ್ಕೆ ಅಂಬೇಡ್ಕರ್ ನೀಡಿದ ಕೊಡುಗೆಯನ್ನು ವಿವರಿಸಿ.

- ಸಂವಿಧಾನದಲ್ಲಿ ದುರ್ಬಲ ವರ್ಗದವರ ಸಬಲೀಕರಣಕ್ಕೆ ಹಲವಾರು ಅವಕಾಶಗಳನ್ನು ಕಲ್ಪಿಸಿಕೊಡಲು ಹೋರಾಡಿ ಸಫಲರಾಗಿದ್ದಾರೆ.
- ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ.
- ಪರಿಶಿಷ್ಟ ಜಾತಿಯವರ ಮೇಲೆ ನಡೆಯುವ ದೌರ್ಜನ್ಯಗಳಿಗೆ ವಿಚಾರಣೆ ನಡೆಸಲು ನ್ಯಾಯಾಲಯಗಳ ಸ್ಥಾಪನೆ.
- ಅಸ್ಪೃಶ್ಯತಾ ನಿರ್ಮೂಲನೆಗೆ ಸಂವಿಧಾನ ಬದ್ಧ ಕಾನೂನು.
- ಪರಿಶಿಷ್ಠರ ಅಭಿವೃದ್ಧಿ – ಸಮಸ್ಯೆಗಳನ್ನು ನಿವಾರಿಸಲು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಆಯೋಗದ ಸ್ಥಾಪನೆ.
- ಮಾನವ ಹಕ್ಕುಗಳ ಪ್ರತಿಪಾದನೆ.
- ಸಮಾನತೆಯ ಪ್ರತಿಪಾದನೆ.
- ಕಾರ್ಮಿಕ ಪಕ್ಷದ ಸ್ಥಾಪನೆ.